ಅ) ಆಧುನಿಕ ಕೃಷಿ ತಂತ್ರಜ್ಞಾನವನ್ನು ರೈತರ ಬಾಗಿಲಿಗೆ ಮುಟ್ಟಿಸಲು ಸರ್ಕಾರವು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

1) ಪ್ರತಿಯೊಂದು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಬ್ಬ ಕೃಷಿ ಸಹಾಯಕವನ್ನು ಇರಿಸಲು ಕೃಷಿ ಇಲಾಖಾ ಪುನರ್ ರಚನೆಯಲ್ಲಿ ಅವಕಾಶಮಾಡಲಾಗಿದೆ. ಈತನು ಗ್ರಾಮ ಮಟ್ಟದಲ್ಲಿ ಮೂಲ ಕಾರ್ಯಕರ್ತನಾಗಿ ರೈತ ಸಮುದಾಯದ ಆಧುನಿಕ ತಂತ್ರಜ್ಞಾನದ ಅವಶ್ಯಕತೆಗಳನ್ನು ಮನೆ ಬಾಗಿಲಿಗೆ ಪೂರೈಸಲು ಅನುಕೂಲ ಕಲ್ಪಿಸಲಾಗಿದೆ.

2) ಕೃಷಿ ತಂತ್ರಜ್ಞಾನವನ್ನು ವಾರ್ತಾಮಾಧ್ಯಮಗಳಾದ ರೇಡಿಯೋ, ದೂರದರ್ಶನ ವಾರ್ತಾ ಪತ್ರಿಕೆಗಳ ಮೂಲಕವೂ ಬಿತ್ತರಿಸಲು ಹಾಗೂ ಕೃಷಿ ಜಾತ್ರೆಗಳು ಮತ್ತು ವಸ್ತುಪ್ರದರ್ಶನಗಳನ್ನು ಏರ್ಪಡಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

3) ರಾಜ್ಯವಲಯದ ಮತ್ತು ಕೇಂದ್ರ ಪುರಸತ ಯೋಜನೆಗಳಡಿಯಲ್ಲಿ ಪ್ರಾತ್ಯಕ್ಷಿಕೆಗಳು ಕ್ಷೇತ್ರೋತ್ಸವಗಳು ಇತ್ಯಾದಿಗಳನ್ನು ಏರ್ಪಡಿಸಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಸಂಘಕ್ಕೆ ನಾಮಕರಣ ಮಾಡಿರುವ ಸದಸ್ಯರ ವಿವರ

576 - ಶ್ರೀ ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸಹಕಾರಸಂಘಗಳಿಗೆ ಸರಕಾರದಿಂದ ನಾಮಕರಣ ಮಾಡಿದವರ ಸಂಖ್ಯೆ ಎಷ್ಟು?

ಆ) ಯಾವ ಯಾವ ಸಂಘಕ್ಕೆ ಎಷ್ಟು ನಾಮಕರಣ ಮಾಡಲಾಗಿದೆ.

ಇ) ಮಾನ್ಯ ಸಚಿವರು ಮತ್ತು ಮುಖ್ಯ ಮಂತ್ರಿಗಳು ಸಿರಿಸಿಯಲ್ಲಿ ಮಾಡಿದ ಭಾಷಣದಲ್ಲಿ ಸಹಕಾರಿ ಸಂಘಗಳಿಗೆ ನಾಮಕರಣವನ್ನು ವಿರೋಧಿಸಿರುವುದು ನಿಜವೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಒಟ್ಟು ಏಳು ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲಾಗಿದೆ.

ಆ) ಉತ್ತರ ಕನ್ನಡ ಜಿಲ್ಲಾ ಸಿರ್ಸಿ ಸೆಂಟ್ರಲ್ ಕೋ-ಆಪರೇಟಿವ್ ಹೋಲಸೇಲ್ ಸ್ಟೋರ್ಸ (ಜನತಾ ಬಜಾರ್) ಸಿರ್ಸಿ, ಇದಕ್ಕೆ ಮೂರು ವ್ಯಕ್ತಿಗಳು, ಉತ್ತರ ಕನ್ನಡ ಜಿಲ್ಲಾ ಮೀನು ಮಾರಾಟ ಫೆಡರೇಷನ್ ನಿ, ಕಾರವಾರ, ಇದಕ್ಕೆ ಒಬ್ಬರನ್ನು ಮತ್ತು ಮೂರು ವ್ಯಕ್ತಿಗಳನ್ನು ಉತ್ತರ ಕನ್ನಡ ಜಿಲ್ಲಾ ಹಣ್ಣು ಮತ್ತು ತರಕಾರಿ ಬೆಳೆಗಾರರ ಸಂಸ್ಕರಣ ಸಂಘ ನಿ, ಶಿರಸಿ ಇವುಗಳಿಗೆ ನಾಮನಿರ್ದೇಶನ ಮಾಡಲಾಗಿದೆ.

ಇ) ಹೌದು.